

ಪುಣೆಯಲ್ಲಿ ಸಾಮಾಜಿಕ ಕಾರ್ಯಕರ್ತೆಯೊಬ್ಬರು ಟ್ಯಾಬ್ ಮೂಲಕ ಮಗುವಿಗೆ ಕಲಿಸುತ್ತಿರುವುದು

ಒಂದು ಮಟ್ಟಿಗೆ ಔಪಚಾರಿಕವಾಗಿಯೇ ಇರಬೇಕು. ಸುಮಾರು, ಕಚೇರಿಗಳಲ್ಲಿ ನಡೆಯುವ ಪರಿಶೀಲನಾ ಸಭೆಗಳ ರೀತಿಯಲ್ಲಿ. ಪಾಠಪ್ರವಚನಗಳ ಮಾಡುವ ಮತ್ತು ಕೇಳುವುದನ್ನೂ ಮೀರಿ, ಕಲಿತದ್ದರ ಕುರಿತು ಇಂತಹ ಮಾತುಕತೆಯನ್ನು ನಡೆಸುವುದಕ್ಕೂ ಒಂದು ಹೊಸ ರೀತಿಯ ತಯಾರಿ ಬೇಕು.

ಶಿಕ್ಷಣದ ಮಾನಸಿಕತೆ ಇದರಲ್ಲೆಲ್ಲಾ ಅತ್ಯಂತ ಸಂಕೀರ್ಣವಾದದ್ದು. ಈ ಮಾನಸಿಕತೆ ಬರುವುದಕ್ಕೆ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ತಾವು ಮಾಡುತ್ತಿರುವ ಕೆಲಸದ ಕುರಿತ ಒಂದು ವೃತ್ತಿಪರ ದೃಷ್ಟಿಕೋನ ಬೆಳೆಯಬೇಕು. ಅಧ್ಯಾಪಕರಿಗೇನೋ ತಮ್ಮ ವೃತ್ತಿಯ ಕುರಿತ ವೃತ್ತಿಪರತೆ ಬರಬಹುದು. ವಿದ್ಯಾರ್ಥಿಗಳಿಗೂ ಅದು ಬರುವುದು ಹೇಗೆ? ಇದರಲ್ಲಿ ಮುಖ್ಯವಾದ ಅಂಶ ಕಲಿಕೆಯನ್ನು ಒಂದು ವೃತ್ತಿ ಎನ್ನುವಂತೆ ನೋಡುವುದು. ಅಂದರೆ, ಕಲಿಯುವುದರಲ್ಲಿ ತಜ್ಞತೆಯನ್ನು ಗಳಿಸುವ ಸಾಧ್ಯತೆಯನ್ನು ಅಧ್ಯಾಪಕರು ಸೋದಾಹರಣವಾಗಿ ತೋರಿಸುತ್ತಿರಬೇಕು.

ದೂರದರ್ಶನದಲ್ಲಿ ನಾವು ಚಿಕ್ಕ ಮಕ್ಕಳ ಗಾಯನದ ಹಲವು ಸ್ಪರ್ಧೆಗಳನ್ನು ನೋಡಿದ್ದೇವೆ. ಅದರಲ್ಲಿ ಹಾಡುವ ಹತ್ತು ಹನ್ನೆರಡು ವರ್ಷದ ಮಕ್ಕಳೂ ಕೂಡಾ ಸಂಗೀತದ ಕಲಿಕೆಯ ಕುರಿತು ಒಂದು ರೀತಿಯ ಮೆಟಾ ಲರ್ನಿಂಗ್ ತಜ್ಞತೆಯನ್ನು ಹೊಂದಿರುತ್ತಾರೆ. ಆ ತಜ್ಞತೆ ಇಲ್ಲದ ಮಿಕ್ಕವರಿಗೆ ಅದೇ ಹಾಡನ್ನು ಕೇಳಿಸಿದರೆ, ಅವರು ಅದನ್ನು ಕಲಿತು ಹಾಡುವುದು ಕಷ್ಟವೇ. ಆದರೆ, ಈ ಮಕ್ಕಳಿಗೆ ಒಂದು ಹಾಡನ್ನು ಕಲಿಯುವುದು ಹೇಗೆ ಎನ್ನುವ ಸೂಕ್ಷ್ಮವಾದ ಜ್ಞಾನ ಇರುತ್ತದೆ. ಈ ಹಾಡನ್ನು ಹಾಡಲು ನನ್ನ ಧ್ವನಿಯಲ್ಲಿ ಯಾವ ರೀತಿಯ ಬದಲಾವಣೆ ಮಾಡಿಕೊಳ್ಳಬೇಕು, ಯಾವ ರೀತಿಯ ಹಾಡನ್ನು ಹಾಡುವುದು ನನಗೆ ಸುಲಭ, ಮತ್ತು ಯಾವ ರೀತಿಯ ಹಾಡುಗಳು ಕಷ್ಟ, ನನ್ನ ಧ್ವನಿಗೆ ಒಗ್ಗುವ ಹಾಡುಗಳು ಯಾವುವು, ಇಂತಹ ಹಲವು ಸೂಕ್ಷ್ಮ ತಿಳಿವಳಿಕೆ ಈ ಮಕ್ಕಳಿಗೆ ಇರುತ್ತದೆ. ಇದೇ ರೀತಿಯ ತಿಳಿವಳಿಕೆ ಶಾಲಾ ಕಾಲೇಜುಗಳ ಕಲಿಕೆಯ ಕುರಿತೂ ಬರುವಂತೆ ಅಧ್ಯಾಪಕರು, ಮನೆಯವರು ನೋಡಿಕೊಳ್ಳಬೇಕು. ಅದನ್ನು ಸಾಧ್ಯವಾಗಿಸುವುದಕ್ಕೆ ಇರುವ ಅತೀ ಸುಲಭದ ಉಪಾಯ ಪ್ರತಿಕ್ರಿಯೆ. ವಿದ್ಯಾರ್ಥಿಗಳ ಕಲಿಕೆ ಮತ್ತು ಕೆಲಸದ ಕುರಿತು ಟೀಕೆಯಲ್ಲದ ಆದರೆ ಚಿಂತನೆಯನ್ನು ಉದ್ದೀಪಿಸುವ ರೀತಿಯ ಪ್ರತಿಕ್ರಿಯೆಯನ್ನು ಕೊಡುವುದನ್ನು ಒಂದು ಅಭ್ಯಾಸ ಮಾಡಿಕೊಳ್ಳಬೇಕು. ಅದು ಕೇವಲ ದೇಶಾವರಿ ಮಾತುಕತೆಯ ರೂಪದಲ್ಲಿದ್ದರೂ ನಡೆಯುತ್ತದೆ. ಆದರೆ ಇಂತಹ ಪ್ರತಿಕ್ರಿಯೆಯನ್ನು ನೀವು ಕೊಡುತ್ತಿದ್ದೀರಿ ಎನ್ನುವುದು ವಿದ್ಯಾರ್ಥಿಗಳಿಗೆ ತಿಳಿದಿರಬೇಕು.

ಶಿಕ್ಷಣದ ಕ್ರಮದಲ್ಲಿ ನಾವು ಮಾಡಿಕೊಳ್ಳಬೇಕಾದ ಹಲವು ಬದಲಾವಣೆಗಳಿವೆ. ಅದರಲ್ಲಿ ಅತೀ ಮುಖ್ಯವಾದದ್ದು, ಸಂವಾದವನ್ನು ಸಾಧ್ಯವಾಗಿಸುವ ತರಗತಿಯ ಕ್ರಮಗಳು. ಇದು ಕೇವಲ ಚರ್ಚಾಸ್ಪದ ವಿಚಾರಗಳ ಕುರಿತು ಮಾತ್ರವಲ್ಲ. ಸ್ಥಾಪಿತ ಸಿದ್ಧಾಂತಗಳನ್ನು ಪಾಠ ಮಾಡುವ ಭೌತಶಾಸ್ತ್ರ ಮತ್ತು ಗಣಿತದಂತಹ ವಿಷಯಗಳಲ್ಲೂ ಇದು ಸಾಧ್ಯ. ಅದಕ್ಕೆ ಒಂದು ಮುಖ್ಯ ಉಪಾಯ, **counterfactual** ವಿಧಾನ. ಅಂದರೆ, ‘ಪ್ರತಿವಾಸ್ತವಿಕ ವಿಧಾನ’. ಹೀಗಲ್ಲದಿದ್ದರೆ ಹೇಗಿರುತ್ತಿತ್ತು ಎಂದು ಕೇಳುವ ವಿಧಾನ. ಜೀವವಿಕಾಸದ ಸಿದ್ಧಾಂತ ನಿಜವಿಲ್ಲದಿದ್ದರೆ ಬೇರೆ ಯಾವ ರೀತಿಯಲ್ಲಿ ಪಳೆಯುಳಿಕೆಗಳ ವಿನ್ಯಾಸಗಳನ್ನು ವಿವರಿಸಲು ಸಾಧ್ಯವಿದೆ ಎಂದು ಕೇಳುವುದು, ಅಥವಾ, ಗುರುತ್ವ ಸಿದ್ಧಾಂತ ಬದಲು ಬೇರೆ ಹೇಗೆ ಬೀಳುವ ಕಾಯಗಳ ವರ್ತನೆಯನ್ನು ವಿವರಿಸಬಹುದು ಎನ್ನುದು ಕೇಳುವುದು. ಕುವೆಂಪುರವರು ಇಂಗ್ಲಿಷ್‌ನಲ್ಲೇ ಕಾವ್ಯ ಬರೆಯುವುದನ್ನು ಮುಂದುವರೆಸಿದ್ದಿದ್ದರೆ, ಕನ್ನಡ ಕಾವ್ಯದ ಮುಂದಿನ ಲಕ್ಷಣ ಹೇಗಿರುತ್ತಿತ್ತು ಎಂದು ಕೇಳುವುದು ಇತ್ಯಾದಿ. ಇವೆಲ್ಲಾ ಯಾವ ಯಾವ ರೀತಿಯಲ್ಲಿ ಸಂವಾದಗಳನ್ನು ಹುಟ್ಟುಹಾಕಬಹುದು ಎನ್ನುವುದಕ್ಕೆ ಉದಾಹರಣೆಗಳಷ್ಟೆ. ಆದರೆ, ಈ ಪ್ರತಿವಾಸ್ತವಿಕ ರೀತಿಯಲ್ಲದೇ ನೇರವಾಗಿಯೂ ಚರ್ಚೆಯ ರೂಪದಲ್ಲಿ ಸಂವಾದವನ್ನು ಹುಟ್ಟುಹಾಕಬಹುದು. ಅತೀ ಮುಖ್ಯವೆಂದರೆ, ಒಟ್ಟು ಶಿಕ್ಷಣವನ್ನು ಸಂವಾದವೆಂಬಂತೆ ನೋಡಲು ಸಾಧ್ಯವಾಗುವುದಕ್ಕೆ ಏನೇನು ಮಾಡಬಹುದೋ ಅದನ್ನು ಪ್ರಯೋಗಿಸಬೇಕು ಎನ್ನುವ ತಿಳಿವಳಿಕೆ ಮುಖ್ಯ.

ಇವೆಲ್ಲವೂ ಒಳ್ಳೆಯ ಅಧ್ಯಾಪಕರು ಮಾಡಿಕೊಂಡೇ ಬಂದಿರುವ ಪ್ರಯೋಗಗಳಷ್ಟೆ. ಈ ಪ್ರಯೋಗಗಳಲ್ಲೇ ಹೊಸತೇನೂ ಇಲ್ಲ. ಆದರೆ ನಾವು ಗಮನಿಸಬೇಕಿರುವುದು ನಮ್ಮ ಶಿಕ್ಷಣ ಆನ್‌ಲೈನ್ ಮಾದರಿಗೆ ಹೊರಳಿದ ಮೇಲೆ ಯಾವ ನಿರ್ದಿಷ್ಟ ರೀತಿಯ ಶೈಕ್ಷಣಿಕವಾದ ಸವಾಲುಗಳನ್ನು ಎದುರಿಸುತ್ತಿದೆ ಎನ್ನುವುದು. ಶೈಕ್ಷಣಿಕವಲ್ಲದೇ ಇನ್ನೂ ಹಲವು ರೀತಿಯ ಸಮಸ್ಯೆಗಳೂ ಈ ಸಂದರ್ಭದಲ್ಲಿ ಎದುರಾಗಿರಬಹುದು. ಆದರೆ, ಅವೆಲ್ಲವೂ ಬೇರೆಯ ಬಾಹ್ಯ ಪರಿಹಾರಗಳನ್ನು ಬೇಡುವ ಸಮಸ್ಯೆಗಳು. ಕಲಿಕೆಯ ಸಮಸ್ಯೆಗಳು ಮಾತ್ರ ಶಿಕ್ಷಣದ ಆಂತರಿಕ ವ್ಯವಸ್ಥೆಯಲ್ಲೇ ಪರಿಹಾರ ಮಾದಬೇಕಾದಂಥವು. ಅದಕ್ಕೆ ಹೊರಗಿನ ಯಾವ ಪರಿಹಾರಗಳೂ ಇಲ್ಲ.

ಪ್ರತಿಕ್ರಿಯಿಸಿ: feedback@sudha.co.in